## ನಕ್ಕುಬಿಡಿ



ಡಾಕ್ಟರ್: (ಫೋನಿನಲ್ಲಿ) 'ಏನ್ರಿ ನೀವು ನಿನ್ನೆ ಕೊಟ್ಟಿದ್ದ ಚೆಕ್ 'ನೋ ಫಂಡ್' ಅಂತಾ ವಾಪಸ್ ಬಂದಿದೆಯಲ್ಲಾ...?

ರೋಗಿ: 'ನೀವು ಟ್ರೀಟ್‌ಮೆಂಟ್ ಕೊಟ್ಟಿದ್ದ ಕಾಯಿಲೇನೂ ವಾಪಸ್ ಬಂದಿದೆಯಲ್ಲಾ ಸಾರ್...!'

★★★

ಪ್ರಶ್ನೆ: ಯಾವ ಪರೀಕ್ಷೆಯಲ್ಲಿ 'ಕಾಪಿ' ಹೊಡೆಯಲು ಬರುವುದಿಲ್ಲ...?

ಉತ್ತರ: 'ಮಂಪರು ಪರೀಕ್ಷೆಯಲ್ಲಿ!

★★★

ಡಾಕ್ಟರ್: 'ನಾನು ನಿಮಗೆ ಕೊಟ್ಟಿದ್ದ ಕೇಶವರ್ಧಕ ತೈಲದಿಂದ ಏನಾದರೂ ಉಪಯೋಗ ಆಯ್ತಾ?'

ಪೇಶಂಟ್: 'ಯಾಕೆ ಡಾಕ್ಟರ್...?'

ಡಾಕ್ಟರ್: 'ಏನಿಲ್ಲ... ನನ್ನ ಮಗಳಿಗೂ ಅದನ್ನೇ ರೆಕಮೆಂಡ್ ಮಾಡ್ಬೇಕು, ಅದಕ್ಕೆ...'

ಸಂಗ್ರಹ: ವಿಜಯಕುಮಾರ ಜೆ. ಹರಪನಹಳ್ಳಿ



### ಹತ್ತೇ ನಿಮಿಷ

ರೋಗಿ ಮನೆಯಿಂದ ವೈದ್ಯರಿಗೆ ಫೋನಾಯಿಸಿದ; 'ಡಾಕ್ಟರೇ ನನಗೆ ಏನೇನೋ ಆಗ್ತಾ ಇದೆ. ಇನ್ನು ಐದೇ ನಿಮಿಷದಲ್ಲಿ ಸಾಯಬಹುದು ಅನ್ನಿಸುತ್ತೆ.'

ವೈದ್ಯ: 'ಕಾಯ್ತಾ ಇರಿ. ಹತ್ತೇ ನಿಮಿಷದಲ್ಲಿ ಬಂದೆ!'

★★★

### ತಾಯಿ ಮತ್ತು ಹೆಂಡತಿ

ತಾಯಿ ಮತ್ತು ಹೆಂಡತಿಯಲ್ಲಿ ವ್ಯತ್ಯಾಸ ಏನು ಗೊತ್ತಾ?

ಒಬ್ಬಳು ನೀನು ಅಳುತ್ತಾ ಈ ಪ್ರಪಂಚಕ್ಕೆ ಬರುವಂತೆ ಮಾಡುತ್ತಾಳೆ. ಇನ್ನೊಬ್ಬಳು ನೀನು ಸಾಯುವರೆಗೂ ಅಳುತ್ತಲೇ ಇರುವಂತೆ ಮಾಡುತ್ತಾಳೆ!

★★★

### ವಿಫಲ ಪುರುಷ

ಯಶಸ್ವೀ ಪುರುಷನ ಹಿಂದೆ ಒಬ್ಬ ಮಹಿಳೆ ಇದ್ದೇ ಇರುತ್ತಾಳೆ.

ವಿಫಲ ಪುರುಷನ ಹಿಂದೆ ಇಬ್ಬರಾದರೂ ಮಹಿಳೆಯರು ಇದ್ದೇ ಇರುತ್ತಾರೆ!

★★★

### ಯಾರ ಮಗು?

ಅಪರೂಪಕ್ಕೆ ಮನೆಗೆ ಬಂದಿದ್ದ ಸ್ನೇಹಿತ ಅಂಗಳದಲ್ಲಿ ಆಡುತ್ತಿದ್ದ ಮಗುವನ್ನು ನೋಡಿ ಹೇಳಿದ, 'ನಿನ್ನ ಮಗ ಥೇಟ್ ನಿನ್ನ ಹಾಗೇ ಕಣೋ.'

ಗುಂಡ ಸಣ್ಣದಾಗಿ ಹೇಳಿದ, 'ಏ ಗಟ್ಟಿಯಾಗಿ ಹೇಳಬೇಡ್ವೋ. ಅದು ನಮ್ಮ ಮನೆ ಕೆಲಸದವಳ ಮಗು!'

ಸಂಗ್ರಹ: ನಡಹಳ್ಳಿ ವಸಂತ್, ಶಿವಮೊಗ್ಗ

---

## ಸಮುದ್ರ ಮಥನ




### ಪಂಚಸೂತ್ರ ಉಪಯುಕ್ತ

ಮುಖಪುಟ ಲೇಖನ 'ಸಮತೂಕಕ್ಕೆ ಸುಲಭ ದಾರಿ'ಯಲ್ಲಿ ಡಾ.ಎಚ್.ಎಸ್.ಪ್ರೇಮ ಅವರು ತಿಳಿಸಿರುವ ಪಂಚಸೂತ್ರಗಳು ಪ್ರಯೋಜನಕಾರಿ.

-ಸು.ವಿಜಯಲಕ್ಷ್ಮಿ, ಶಿವಮೊಗ್ಗ

### ವಿಧಿ ವಿಲಾಸ!

ಗೋಲ್ಕೊಂಡ ಕೋಟೆಯ ಬಗೆಗಿನ ಲೇಖನ ಹಾಗೂ ಚಿತ್ರಗಳು ಎಲ್ಲರ ಮನಸೆಳೆಯುವಂತಿವೆ. ಗೈಡ್ ಜೊತೆ ಸುತ್ತಾಡಿದಾಗ ತಿಳಿದ ವಿಷಯಗಳಿಗಿಂತ ಹೆಚ್ಚಿನ ವಿಷಯಗಳು ಲೇಖನದಲ್ಲಿವೆ. ಆದರೆ, ದೂರದ ವಿಜಾಪುರ ಜಿಲ್ಲೆಯಿಂದ ಬಂದು, ಹಾಸನದ ಜಿಲ್ಲೆಯ ಸಕಲೇಶಪುರದಲ್ಲಿ ನೆಲೆಸಿದ್ದ ಸಂಶೋಧಕ ಹಾಗೂ ಈ ಲೇಖನದ ಕರ್ತೃ ಚಂದ್ರಶೇಖರ್ ಧೂಳೇಕರ್ ಅವರು ಲೇಖನ ಪ್ರಕಟವಾಗುವ ಕೆಲವೇ ದಿನಗಳ ಮೊದಲು ನಿಧನರಾಗಿದ್ದು ದುಃಖದ ಸಂಗತಿ!

-ಡಾ. ಕೆ.ಕೆ. ಜಯಚಂದ್ರ ಗುಪ್ತ, ಹಾಸನ

### ಗೋಯಲ ಕೊಂಡ

ಗೋಲ್ಕೊಂಡ ಎಂಬ ಹೆಸರು ಬರಲು ಈ ಪ್ರದೇಶಗಳಲ್ಲಿ ಗೋವು ಮೇಯಿಸುತ್ತಿದ್ದರಂತೆ. ಸುತ್ತಲೂ ಕೊಂಡವಿರುವುದರಿಂದ ಗೋಯಲ ಕೊಂಡ ಎಂಬ ಹೆಸರು ಅಪಭ್ರಂಶಗೊಂಡು ಗೋಲ್ಕೊಂಡ ಹೆಸರು ಬಂತು ಎಂಬ ಪ್ರತೀತಿ ಇದೆ. ಚಿತ್ರಗಳು ಚೆನ್ನಾಗಿವೆ.

-ಮೊಳಕಾಲ್ಮುರು ಸುರೇಶ, ಬಳ್ಳಾರಿ

### 'ಸುಧಾ' ಬರಹದಿಂದ ತಿಳಿಯಿತು

ಕಂಪ್ಯೂಟರ್ ಆನ್ ಮಾಡಿದ ಕೂಡಲೇ ಡೆಸ್ಕ್‌ಟಾಪ್‌ನಲ್ಲಿ ಗೋಚರಿಸುವ ಹಸಿರು ಹುಲ್ಲಿನ ಮೇಲೆ ತಿಳಿಯ ಬಣ್ಣದ ಮೋಡಗಳಿಂದ ಕೂಡಿದ ನೀಲಿ ಆಕಾಶದ ಚಿತ್ರ ನೋಡುವುದೇ ಕಣ್ಣಿಗೆ ಒಂದು ಹಬ್ಬ. ಇದು ನ್ಯೂಯಾರ್ಕ್‌ನ ಪ್ರಖ್ಯಾತ ಛಾಯಾಗ್ರಾಹಕ ಚಕ್'ಒ ರೇರ್ ತೆಗೆದದ್ದು ಎಂದು ಅವನೀಶ್ ಬರಹ ಓದಿದ ನಂತರವೇ ತಿಳಿದದ್ದು.

-ಪಿ.ಎನ್. ಶ್ರೀವತ್ಸ, ಬೆಂಗಳೂರು

### ಪುಸ್ತಕ ಮತ್ತು ಗನ್!

'ವಂಡರ್ ಪುಟ'ದಲ್ಲಿ ವಸಂತ ಮಾಲವಿಯವರ ಗನ್ ಮಾದರಿಯ ಪುಸ್ತಕಗಳು ಆಕರ್ಷಕವಾಗಿದ್ದವು.

-ಶೀಲಾ ಸತ್ಯೇಂದ್ರ ಸ್ವಾಮಿ, ಹರವೆ ಮಠ

### ತಾವರೆ ಮೇಲಿನ ನೀರಿನ ಗುಳ್ಳೆ

'ಪ್ರಪಂಚದಲ್ಲಿದ್ದು ಪ್ರಾಪಂಚಿಕರಾಗದಿರಿ' ಎಂಬ ಸಂದೇಶ ಸಾರ್ವಕಾಲಿಕ. ತಾವರೆ ಎಲೆಯ ಮೇಲಿನ ನೀರಿನ ಗುಳ್ಳೆಯಂತೆ; ಇರಬೇಕು– ಇರದಿರಬೇಕು ಎಂದು ನಮ್ಮ ಜನಪದರು ಹೇಳುತ್ತಿದ್ದ ವಿಚಾರ ಶಿಕಾಕು ಅವರ ವಿಚಾರ ಲಹರಿ ಓದುವಾಗ ನೆನಪಾಯಿತು.

-ಸೌದಾಮಿನಿ ಪ್ರಭಾಕರ, ಮೈಸೂರು

### ತಪ್ಪು ವ್ಯಾಖ್ಯಾನ

ರಾಮಕೃಷ್ಣ ಪರಮಹಂಸರು ತಮ್ಮ ಪತ್ನಿ ಮೇಲೆ ಬ್ರಹ್ಮಚರ್ಯ ನಿಯಮವನ್ನು ಹೇರಿದರು ಎಂದು ಶಿಕಾಕು ವಿಚಾರ ಲಹರಿಯಲ್ಲಿ ಬರೆದಿದ್ದಾರೆ. ಇದು ತಪ್ಪು. ಪತ್ನಿ ಈ ನಿಯಮವನ್ನು ಮನಸಾರೆ ಒಪ್ಪಿಕೊಂಡಿದ್ದರು ಎಂದೇ ಹಲವು ಗ್ರಂಥಗಳಲ್ಲಿ ಉಲ್ಲೇಖವಾಗಿದೆ.

-ಎಂ.ರಾಮಸ್ವಾಮಿ, ಮೈಸೂರು/ ಶಂಕರೇಗೌಡ ತುಂಬಕೆರೆ, ಮಂಡ್ಯ

### ಇದು ನಿಜಕ್ಕೂ ಹೊರೆ!

ಪುಸ್ತಕದ ಹೊರೆ! ಪಿ.ಪಿ. ಬಾಬುರಾಜ್ ವಸ್ತು ಸ್ಥಿತಿಯನ್ನು ಯಥಾವತ್ತಾಗಿ ಅರ್ಥಪೂರ್ಣವಾಗಿ ಬರೆದಿದ್ದಾರೆ.

-ಎಂ.ಎಲ್. ಲಕ್ಷ್ಮಣ್‌ರಾವ್, ದಾವಣಗೆರೆ

### ಅಚ್ಚರಿಯ ಜೀವನ ಶೈಲಿ

'ಅಮಿಶ್: ಲೈಫು ಹೀಗೇನೆ!' ಗೀತಾ ಗುರುಸ್ವಾಮಿ ಪ್ರವಾಸ ಲೇಖನ ಅಮೆರಿಕಾದಲ್ಲಿ 18ನೇ ಶತಮಾನಕ್ಕೆ ಒಗ್ಗಿಕೊಂಡ ಅಮಿಶ್ ಜನಾಂಗದ ಕುರಿತು ಅಚ್ಚರಿಯ ಮಾಹಿತಿ ನೀಡಿದ್ದಾರೆ.

-ಎಚ್. ಆನಂದ್ ಕುಮಾರ್, ಚಿತ್ರದುರ್ಗ

### ಪತ್ತೇದಾರಿ ಕಥೆಯ ಖುಷಿ

'ಸುಧಾ'ದಲ್ಲಿ ಪತ್ತೇದಾರಿ ಕಥೆ ನೋಡಿಯೇ ಖುಷಿಯಾಯಿತು. ಕಥೆ ಸ್ವಾರಸ್ಯಮಯವಾಗಿತ್ತು. ಪತ್ತೇದಾರಿ ಕಥೆಯನ್ನು ಆಗಾಗ ಪ್ರಕಟಿಸುತ್ತಿರಿ.

-ಸಿ.ಜಿ. ವಾಸುಕಿ, ಬೆಂಗಳೂರು/ ಕೊಹಿಮ, ಬಸರಕೋಡು

### ಸತ್ ಆನಂದ, ಸದಾನಂದ ಬೇರೆ

ಪದಬಂಧ ವಿಭಾಗ ಇತರ ಪತ್ರಿಕೆಗಳಿಗಿಂತ 'ಸುಧಾ'ದಲ್ಲಿ ಚೆನ್ನಾಗಿ ಮೂಡಿಬರುತ್ತದೆ. ಆದರೆ ನ. 24ರ ಪದಬಂಧದಲ್ಲಿ– ಎಡದಿಂದ ಬಲಕ್ಕೆ ಪದ 1 'ಸದಾನಂದ' ಎಂಬ ಸೂಚನೆ ಬರುತ್ತದೆ. ಅದಕ್ಕೆ ಅರ್ಥ 'ಯಾವಾಗಲೂ ಸಂತೋಷ' ಎಂಬಂತೆ ತಿಳಿಸಿದ್ದಾರೆ. ಆದರೆ ಸದಾನಂದ ಅಂದರೆ ಸತ್+ಆನಂದವೇ (ಜಶ್ತ್ವ ಸಂಧಿ) ಹೊರತು ಸದಾ ಆನಂದ ಅಲ್ಲ!

-ವಿ. ಮಲ್ಲಿಕಾರ್ಜುನಯ್ಯ, ಬೆಂಗಳೂರು